Inam Villages in Mysore Division.

*Q.—504. Sri B. H. LAKSHMANAIAH (Belur).—

Will the Government be pleased to state :—

(*a*) the number of Inam Villages in Mysore Division ;

(*b*) the total amount of compensation paid in respect of these villages and the total extent of land given to the ryots in the said Division ?

A.—Sri M. V. KRISHNAPPA (Minister for Revenue).—

(*a*) 651.

(*b*) The total amount of compensation paid is Rs. 66,59,062-92 nP. No lands are given to the ryots under the Inam Abolition Act. Occupancy rights have, however, been recognised in respect of Kadim Tenants, Permanent Tenants and Quasi-permanent tenants who were in occupation of 1,96,005 acres and 14 guntas.

Calling attention to matter of urgent Public Importance—Hunger Strike by Sri H. Thimmaiah in Challakere, Chitaldrug District.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ಮಂಡಲಿಯ ಸದಸ್ಯರಾದ ಶ್ರೀ ಎಚ್. ತಿಮ್ಮಯ್ಯ ಅವರ ಉಪವಾಸ ಸತ್ಯಾಗ್ರಹದಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ವಿದ್ಯಾಶಾಖೆಯ ಮಂತ್ರಿಗಳ ಗಮನಕ್ಕೆ ನಾನು ತರುತ್ತೇನೆ.

† Sri S. R. KANTHI (Minister for Education).—The hunger strike by Sri H. Thimmaiah, Taluk Board Member, before the D. E. O. Office was in connection with the transfer of primary school teacher. Sir, in this connection the Director of Public Instruction was in Chitradurga some time back and induced Sri Thimmaiah to give up fast. Sri Thimmaiah has given up the fast.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಶ್ರೀಮಾನ್ ಎಚ್. ತಿಮ್ಮಯ್ಯನವರು ಯಾವ ಕಾರಣದಿಂದ ಯಾತಕ್ಕೋಸ್ಕರ ಉಪವಾಸ ಮಾಡಿದರು. ಯಾವ ಉದ್ದೇಶಕ್ಕೋಸ್ಕರ ಅವರು ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸಿನ ಮುಂದೆ ಸತ್ಯಾಗ್ರಹ ಮಾಡಿದರು ? ಆ ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸರ ಮೇಲೆ ಯಾವ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಈಗಾಗಲೇ ಅದಕ್ಕೆ ನಾನು ಉತ್ತರವನ್ನು ಹೇಳಿದ್ದೇನೆ. ಒಬ್ಬರು ಉಪಾಧ್ಯಾಯರನ್ನು ಟ್ರಾನ್ಸ್‌ಫರ್ ಮಾಡಿದ್ದರು. ಅವರನ್ನು ಟ್ರಾನ್ಸ್‌ಫರ್ ಮಾಡಕೂಡದು ಎಂದು ಅವರು ಉಪವಾಸ ಮಾಡಿದರು.

ಶ್ರೀ ಕೆ. ಲಕ್ಕಪ್ಪ.—ಅವರು ಉಪವಾಸ ಸತ್ಯಾಗ್ರಹ ಮಾಡಿದ್ದು ಆ ಅಧಿಕಾರಿಗಳ ವರ್ತನೆಯ ಬಗ್ಗೆ ; ಸರಿಯಾದ ರೀತಿಯಲ್ಲಿ ನಡವಳಿಕೆ ನಡೆಯದ ಬಗ್ಗೆ ಎಂಬುದು ಗೊತ್ತಿಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಆ ವರ್ತಮಾನವಿಲ್ಲ. ಅವರು ಉಪವಾಸ ಮಾಡಿದ್ದು ಸ್ಕೂಲ್ ಉಪಾಧ್ಯಾಯರೊಬ್ಬರನ್ನು ಟ್ರಾನ್ಸ್‌ಫರ್ ಮಾಡಿದ್ದಕ್ಕಾಗಿ ಎಂದು ಅಲ್ಲಿಂದ ವರದಿ ಬಂದಿದೆ.